ಕಾರ್ಯಾಚರಣೆಯ ರಹಸ್ಯ ಅಡಗಿರುವುದು. ಸ್ಕಾಫರ್ ತಂಡ ತಾವು ಕಲೆಹಾಕಿದ ಮಾಹಿತಿಯ ಜೊತೆಗೆ ಆರ್ಯರಕ್ತವನ್ನು ಕದ್ದೊಯ್ಯುವ ಷಡ್ಯಂತ್ರದ ಅರಿವಾಗಿದ್ದು ಹಲವು ವರ್ಷಗಳ ನಂತರ. ಇದನ್ನು ತಿಳಿಸಲು ನನ್ನ ಕತೆಗೆ ಹಿಂದಿರುಗುತ್ತೇನೆ.

ಅವರು ಹೋದಮೇಲೆ ಮೂರು ತಿಂಗಳಲ್ಲಿ ನಾನು ಗರ್ಭಿಣಿಯಾಗಿರುವೆನೆಂದು ಅರಿತೆ. ಆದರೆ ಈ ವಿಷಯವನ್ನು ನನ್ನ ಜನರಿಗೆ ತಿಳಿಸಲು ಇಷ್ಟವಾಗಲಿಲ್ಲ. ಧೈರ್ಯವೂ ಇರಲಿಲ್ಲ. ಹಾಗಾಗಿ ಅವರು ಕೊಟ್ಟ ಹಣದ ಸಹಾಯದಿಂದ ಅವರು ಹೇಳಿದ ಸ್ಥಳದತ್ತ ಪ್ರಯಾಣ ಬೆಳೆಸಿದೆ. ಕೆಲವು ಕಡೆ ಟಿಬೆಟ್ ಭಾರತದ ಗಡಿಯನ್ನು ದಾಟಬೇಕಿತ್ತು. ನಾಡ ಜನರಾದ ನಮಗೆ ಅದು ಕಷ್ಟವಾಗಲಿಲ್ಲ. ಸುಮಾರು ಒಂದು ತಿಂಗಳ ಪ್ರಯಾಣ ಮಾಡಿ ಅವರು ಹೇಳಿದ ಸ್ಥಳ ತಲುಪಿದೆ – ದಾಹ್ ಹಳ್ಳಿ, ಈಗ ನೀನಿರುವ ಹಳ್ಳಿ. ವಿಚಿತ್ರವೆಂದರೆ ಸ್ಥಳೀಯರ ಸಹಾಯದಿಂದ ಈಗಾಗಲೆ ಒಂದೆಡೆ ಸುವ್ಯವಸ್ಥಿತ ಶಿಬಿರವನ್ನೇ ಸ್ಥಾಪಿಸಲಾಗಿತ್ತು. ಹಾಗಾಗಿ ಅಲ್ಲಿಗೆ ತಲುಪುತ್ತಿದ್ದಂತೆಯೆ ಅತ್ಯಂತ ಆದರದಿಂದ ನನ್ನನ್ನು ಬರಮಾಡಿಕೊಳ್ಳಲಾಯಿತು. ಆಗ ನಾನು ಸುಮಾರು ಐದು ತಿಂಗಳ ಗರ್ಭಿಣಿ. ವಿಶೇಷವೆಂದರೆ ನನ್ನ ಹಾಗೆ ಇನ್ನೂ ಮೂವರು ಹೆಂಗಸರು ಈಗಾಗಲೆ ಅಲ್ಲಿದ್ದರು. ಎಲ್ಲರೂ ಟಿಬೆಟಿನವರು, ಅವರೂ ಗರ್ಭಿಣಿಯರೇ. ಇಬ್ಬರು ಎಂಟು ತಿಂಗಳ, ಮತ್ತೊಬ್ಬರು ಒಂಬತ್ತು ತಿಂಗಳ ಗರ್ಭಿಣಿಯರು. ಅಷ್ಟೆ ಅಲ್ಲದೆ ಇನ್ನೂ ನಾಲ್ಕೈದು ಜನರು ಅಲ್ಲಿಗೆ ಬರುವವರಿದ್ದಾರೆ ಎಂದೂ ತಿಳಿಯಿತು. ಅವರೆಲ್ಲರೂ ಸ್ಕಾಫರ್ ತಂಡದಲ್ಲಿ ಮಾದರಿಗಳಾಗಿ ಆಯ್ಕೆಯಾಗಿ ಅಳತೆಗೆ ಒಪ್ಪಿಸಿಕೊಂಡವರು. ನಾನು ಅಲ್ಲಿ ತಲುಪಿದ ದಿನವೆ, ರಾತ್ರಿ ಮಾತನಾಡುವಾಗ ತಿಳಿಯಿತು – ನನಗಾದ ಅನುಭವಕ್ಕೆ ಅವರೂ ಬಲಿಯಾಗಿ ಗರ್ಭಿಣಿಯಾದವರು ಎಂದು. ಅವರಲ್ಲಿ ಇಬ್ಬರು ತಮ್ಮ ಗಂಡಂದಿರನ್ನೂ ತೊರೆದು ಬಂದಿದ್ದರು – ಜರ್ಮನ್ನರು ತೋರಿದ ಆಮಿಷಗಳಿಗೆ ಬಲಿಯಾಗಿ. ಆ ಸದ್ಯಕ್ಕೆ ನಮಗಾರಿಗೂ ಮುಂದಿನ ದಾರಿ ಎಲ್ಲಿಗೆ ಹೇಗೆ ಎಂಬ ಬಗ್ಗೆ ಏನೂ ತಿಳಿದಿರಲಿಲ್ಲ. ಸ್ಥಳೀಯರಿಗೂ ಸಹ. ಆದರೆ ಯಾರೋ ಬಂದು ರಕ್ಷಿಸುತ್ತಾರೆ, ನಮ್ಮ ಜೀವನಕ್ಕೆ ಒಂದು ದಾರಿದೀಪ ತೋರಿಸುತ್ತಾರೆ ಎಂಬ ದೃಢವಾದ ನಂಬಿಕೆಗಳಿಂದಲೆ ಕಾಯತೊಡಗಿದೆವು. ಅನಿರ್ದಿಷ್ಟ ಭವಿಷ್ಯದಲ್ಲಿ ಭರವಸೆ ಹೊತ್ತು, ನಮ್ಮ ಸಂಕಷ್ಟದಿಂದ ಬಿಡುಗಡೆಯಾಗಲು ಅಗೋಚರ ಹಾದಿ ಸಿಗುತ್ತದೆ ಎಂದು ನಂಬಿ ಕಾದು ಕುಳಿತೆವು. ಈ ದಾರಿ ಯಾವುದು? ಅದು ನಿಜಕ್ಕೂ ನಮ್ಮ ಬಿಡುಗಡೆಯ ದಾರಿಯೆ? ಎಂಬಿಂತಹ ಪ್ರಶ್ನೆಗಳಿಗೆ ನನಗೆ ಉತ್ತರ ದೊರೆತದ್ದು ಹಲವಾರು ವರ್ಷಗಳ ನಂತರ. ಆದರೆ ಆ ಸದ್ಯಕ್ಕೆ ಎಲ್ಲರಿಗೂ ಒಂದು ಆಘಾತ ಬಂದೊದಗಿತ್ತು.

1939ರ ಅಕ್ಟೋಬರ್‌ನ ಒಂದು ದಿನ. ನಾವು ಅಲ್ಲಿಗೆ ಬಂದು ಸುಮಾರು ಒಂದು ವರ್ಷವಾಗಿತ್ತು. ನಿಮ್ಮ ತಂದೆ ಹುಟ್ಟಿದ್ದ. ನಮ್ಮ ವ್ಯವಸ್ಥಾಪಕರಿಗೆ ಒಂದು ತುರ್ತು ಸುದ್ದಿ ಬಂದಿತ್ತು. 'ಪಶ್ಚಿಮದಲ್ಲಿ ದೊಡ್ಡ ಯುದ್ಧವೊಂದು ಪ್ರಾರಂಭವಾಗಿದೆ, ಹಾಗಾಗಿ ನಮಗಾಗಿ ಬರಬೇಕಿದ್ದವರು ಬರಲು ಸಾಧ್ಯವಾಗುತ್ತಿಲ್ಲ' ಎಂದು. ಅಲ್ಲದೆ 'ಈ ಯುದ್ಧ ಎಲ್ಲ ಕಡೆಯೂ ಹರಡುವ ಸಾಧ್ಯತೆ ಇದ್ದು, ಎಲ್ಲ ಅನಿಶ್ಚಿತತೆ ದೂರವಾಗಲು ಹಲವು ವರ್ಷಗಳೇ ಆಗುವುದರಿಂದ, ಅಲ್ಲಿ ಯಾರೂ ಕಾಯುವುದು ಬೇಡ; ಎಲ್ಲರೂ ತಮ್ಮ ತಮ್ಮ ಜಾಗಗಳಿಗೆ ಹಿಂದುರುಗಲೇ ಬೇಕು' ಎಂದು. ಸುದ್ದಿ ಕೇಳಿ ನಮಗೆ ದಂಗುಬಡಿದಿತ್ತು. ನಮ್ಮನ್ನು ನೋಡಿಕೊಳ್ಳುತ್ತಿದ್ದ ಸ್ಥಳೀಯರು ಕೂಡ ವಿಧಿಯಿಲ್ಲದೆ, 'ಇನ್ನು ಶಿಬಿರವನ್ನು ನಿಭಾಯಿಸಲು ಸಾಧ್ಯವಾಗದು. ನಿಮ್ಮ ಪಾಡು ನಿಮಗೆ' ಎಂದರು. ಯಾರಿಗೂ ದಿಕ್ಕು ತೋಚದಾಯಿತು. ವಿಧಿ